ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ಸಿಸಿ ಸಂಖ್ಯೆ: **1109/ 2024**

ದಿನಾಂಕ: **10.03.2025**

ಪಿರ್ಯಾದುದಾರರು: ರಾಜ್ಯದ ಪರವಾಗಿ ನಗರ ಠಾಣಾ ಪೋಲಿಸರು

ವಿರುದ್ಧ

ಆರೋಪಿ: ಅಹಮದ್ ಕಬೀರ್

ದೋಷಾರೋಪಣೆ

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ಸಿ.ವೀರಭದ್ರಯ್ಯ ಎಂ.ಎ.,ಎಲ್‌ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿಯಾದ ನಿಮ್ಮ ವಿರುದ್ಧ ಹೊರಿಸುವ ಆರೋಪಣೆ ಏನೆಂದರೆ:

ದಿನಾಂಕ: **11-02-2022** ರಿಂದ **17-02-2022** ರವರೆಗೆ ಯಾವುದೋ ಒಂದು ದಿನ ರಾತ್ರಿ ಸಮಯದಲ್ಲಿ ಆರೋಪಿಯಾದ ನೀವು ಚಿಕ್ಕಮಗಳೂರು ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಕ್ಕಮಗಳೂರು ನಗರದ ಸಿ.ಡಿ.ಎ. ಲೇಔಟ್ ಕಲ್ಯಾಣ ನಗರದ **5** ನೇ ಕ್ರಾಸ್ **, 1** ನೇ ಮೈನ್ **1** ನೇ ಹಂತದಲ್ಲಿರುವ ಚಾಸಾ**-1** ರವರ ಮನೆಯ ಹಿಂಭಾಗದ ಕಬ್ಬಿಣದ ಗೇಟ್ ಗೆ ಹಾಕಿದ್ದ ಬೀಗವನ್ನು ಕಬ್ಬಿಣದ ರಾಡ್ ನಿಂದ ಮೀಟಿ ಮುರಿದು ಮನೆಯ ಒಳಗಡೆ ನುಗ್ಗಿ ಕಳ್ಳತನ ಮಾಡುವ ಉದ್ದೇಶದಿಂದ ಒಳಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ**.** ಆ ಕಾರಣ ಆರೋಪಿಯಾದ ನೀವು ಭಾ**.**ದ**.**ಸಂ**.** ಕಲಂ **457** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂ:

ಮೇಲೆ ಹೇಳಿದ ದಿನಾಂಕ**,** ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ**-1** ರವರ ಮನೆಯ ಒಳಗಡೆ ಇರುವ ಬೀರುವಿನ ಲಾಕ್ ಮುರಿದು ಬೀರುವಿನ ಡೋರ್ ಓಪನ್ ಮಾಡಿ ಅದರಲ್ಲಿದ್ದ ಸುಮಾರು **34** ಗ್ರಾಂ ಚಿನ್ನದ ಒಡವೆಗಳು ಮತ್ತು ಸುಮಾರು **230** ಗ್ರಾಂ ಬೆಳ್ಳಿಯ ಒಡವೆಗಳು ಹಾಗೂ ರೂ**.75,000-00** ಹಣವನ್ನು

ಕಳ್ಳತನ ಮಾಡಿರುತ್ತೀರಿ. ಆ ಕಾರಣ ಆರೋಪಿಯಾದ ನೀವು ಭಾ.ದ.ಸಂ. ಕಲಂ **380** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಟ್ಟಿರುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ಸಹಿ/-
( ಸಿ. ವೀರಭದ್ರಯ್ಯ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ವೈ.ಮ.